ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 13 ನೇ ಮಾರ್ಚ್, 2020

ಪಶುಸಂಗೋಪನೆ ಇಲಾಖೆಯಲ್ಲಿರುವ ಯೋಜನೆಗಳ ಕುರಿತು

ಶ್ರೀ ಆರ್. ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

878 (967) ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪಶುಸಂಗೋಪನೆ ಇಲಾಖೆಯಲ್ಲಿರುವ ಯೋಜನೆಗಳು ಯಾವುವು; ಸದರಿ ಯೋಜನೆಯಲ್ಲಿ ರಾಜ್ಯದ ಹಾಗೂ ಕೇಂದ್ರದ ಪಾಲುಗಳೆಷ್ಟು; (ಸಂಪೂರ್ಣ ವಿವರ ನೀಡುವುದು)

(ಆ) ಪಶುಸಂಗೋಪನಾ ಇಲಾಖೆಯಲ್ಲಿರುವ ಯೋಜನೆಗಳನ್ನು ಪಡೆದುಕೊಳ್ಳಲು ಇರುವ ನಿಯಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) 2016-17 ಸಾಲಿನಿಂದ 2019-20ನೇ ಸಾಲಿನವರೆಗೆ ಪಶುಸಂಗೋಪನಾ ಇಲಾಖೆಯಿಂದ ಯಾವ ಯಾವ ಯೋಜನೆಯಡಿ ಎಷ್ಟು ಫಲಾನುಭವಿಗಳು ಲಾಭ ಪಡೆದುಕೊಂಡಿರುತ್ತಾರೆ ; (ಸಂಪೂರ್ಣ ವಿವರಗಳನ್ನು ಫಲಾನುಭವಿಯ ಹೆಸರುಗಳೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಪಶುಸಂಗೋಪನಾ ಇಲಾಖೆಯಿಂದ ಇಲ್ಲಿಯವರೆಗೆ ನೀಡಿದಂತಹ ಜಾನುವಾರುಗಳ ಪೈಕಿ ಎಷ್ಟು ಜಾನುವಾರುಗಳು ಮೃತಪಟ್ಟಿರುತ್ತವೆ; ಆರ್ಥಿಕ ವರ್ಷವಾರು ವಿತರಣೆಯಾದ ವಿವರ ಹಾಗೂ ಅದರಲ್ಲಿ ಮೃತವಾದಂತಹ ಜಾನುವಾರುಗಳೆಷ್ಟು ? (ವಿವರಗಳನ್ನು ಜಿಲ್ಲಾವಾರು ಮಾಹಿತಿ ನೀಡುವುದು ಹಾಗೂ ವಿತರಿಸಲಾದ ಹಾಗೂ ಮೃತ ಹೊಂದಿದ ಜಾನುವಾರುಗಳ ಶೇಕಡವಾರು ಮಾಹಿತಿ ನೀಡುವುದು)